ಶ್ರೀ ಕಡಿದಾಳ್ ಮಂಜಪ್ಪ.—ನೆಲಮಂಗಲ ತಾಲ್ಲೂಕಿನಲ್ಲಿ 240 ರೂಪಾಯಿಗಳನ್ನೂ, ಮಾಗಡಿ ತಾಲ್ಲೂಕಿನಲ್ಲಿ 170 ರೂಪಾಯಿಗಳನ್ನೂ ರಿಲೀಫಾಗಿ ಕೊಟ್ಟಿದೆ. ದೊಡ್ಡಬಳ್ಳಾಪುರ ತಾಲ್ಲೂಕಿಗೆ ಇನ್ನೂ ರಿಲೀಫ್ ದುಡ್ಡು ಮಂಜೂರಾಗಿಲ್ಲ. ಮಂಜೂರಾಗುವುದರಲ್ಲಿದೆ.

ಶ್ರೀ ಎಂ. ಹನುಮಂತಯ್ಯ.—ಈ ರಿಲೀಫ್ ಒಬ್ಬೊಬ್ಬ ರೈತರಿಗೋ ಅಥವಾ ಎಲ್ಲರಿಗೂ ಒಟ್ಟಾಗಿ ಕೊಟ್ಟಿದ್ದೀರೋ ?

ಶ್ರೀ ಕಡಿದಾಳ್ ಮಂಜಪ್ಪ.—ಒಟ್ಟಿಗೆ ಎಂದು ಕೊಟ್ಟಿದೆ.

ಶ್ರೀ ಎಂ. ಹನುಮಂತಯ್ಯ.—ಒಬ್ಬೊಬ್ಬ ರೈತನಿಗೆ ಒಂದು ನೂರಿರ ರೂಪಾಯಿಗಳಷ್ಟು ನಷ್ಟವಾಗಿರುವಾಗ ಒಟ್ಟಿಗೆ 200-240 ರೂಪಾಯಿಗಳು ರಿಲೀಫ್ ಎಂದು ಕೊಟ್ಟರೆ ನೂಕಾಗುತ್ತದೆಯೇ ?

ಶ್ರೀ ಕಡಿದಾಳ್ ಮಂಜಪ್ಪ.—ಬೆಂಕಿಬಿದ್ದು ನುಟ್ಟುಹೋದಂತ ರಾಗಿ ಹುಲ್ಲಿನ ಬಣವೆಗಳ ಮಾಲೀಕರೆಲ್ಲರಿಗೂ ಒಬ್ಬೊಬ್ಬರಿಗೂ ರಿಲೀಫ್ ಕೊಡಬೇಕೆಂದು ಸರ್ಕಾರದವರೇನೂ ನಿಯಮ ಮಾಡಿಲ್ಲ. ಆ ರೀತಿ ರಿಲೀಫನ್ನು ಪ್ರತಿಯೊಬ್ಬರಿಗೂ ಕೊಡುತ್ತಾ ಹೋದರೆ ಖಜಾನೆ ಉಳಿಯುತ್ತದೆಯೇ !

Sri ALUR HANUMANTHAPPA.—In view of fire accidents taking place in so many places, is it not necessary to bring forward a scheme to cover the crops under the insurance scheme ?

Sri T. SUBRAMANYA.—Crop insurance is not under contemplation.

ಶ್ರೀ ಎಂ. ಕೆ. ಬೊಮ್ಮೇಗೌಡ.—ನೀವು ಆ ಕಂಪೆನ್‌ಸೇಷನನ್ನು ಯಾವ ಒಂದು ಆಧಾರ, ಅಥವಾ ತತ್ವದಮೇಲೆ ಅವರಿಗೆ ಕೊಡುತ್ತೀರಿ ?

ಶ್ರೀ ಕಡಿದಾಳ್ ಮಂಜಪ್ಪ.—ಕಂಪೆನ್‌ಸೇಷನ್ ಕೊಡುವುದಿಲ್ಲ. ರಿಲೀಫ್ ಎಂದು ಹಣ ಸಹಾಯ ಮಾಡುತ್ತೇವೆ. ಅದಕ್ಕೆ ಕೆಲವು ನಿಗದಿಯಾದ ರೂಲ್ಸ್ ಇವೆ.

Sri ALUR HANUMANTHAPPA.—Was there not a crop insurance some years back, Sir ?

Sri T. SUBRAMANYA.—Not to my knowledge, Sir.

ಶ್ರೀ ಬಿ. ಎಲ್. ನಾರಾಯಣಸ್ವಾಮಿ.—ನಿಗದಿಯಾದ ರೂಲ್ಸ್ ಇವೆ ಎಂದು ಹೇಳಿದಿರಿ. ಆ ರೂಲ್ಸನ್ನು ಯಾವಾಗ ಮಾಡಲಾಯಿತು ?

ಶ್ರೀ ಕಡಿದಾಳ್ ಮಂಜಪ್ಪ.—21ನೇ ಜುಲೈ 1958 ರಲ್ಲಿ ಮಾಡಿದ್ದು.

ಶ್ರೀ ಬಿ. ಎಲ್. ನಾರಾಯಣಸ್ವಾಮಿ—ಈ ರೀತಿಯಾಗಿ ನಷ್ಟಹೊಂದಿ ನೊಂದವರಿಗೆ ನಾಕಷ್ಟು ಪರಿಹಾರ ಕೊಡುವುದು ಅವಶ್ಯಕವಲ್ಲವೇ ?

ಶ್ರೀ ಕಡಿದಾಳ್ ಮಂಜಪ್ಪ—ಅಕಸ್ಮಾತಾಗಿ ಬೆಂಕಿ ಬಿದ್ದು ನಷ್ಟವಾಗಿರುವುದನ್ನೆಲ್ಲಾ ತೆಗೆದು ಕೊಂಡರೆ ಸರ್ಕಾರಕ್ಕೆ ಎಷ್ಟು ದುಡ್ಡು ಬೇಕಾಗುತ್ತದೆ. ಆ ರೀತಿ ಕೊಡುವುದಕ್ಕಾಗುವುದಿಲ್ಲ.

SANCTION OF GOVERNMENT GRANT FOR CONSTRUCTING DRINKING WATER WELLS IN TIPTUR TALUK.

* *Q.*—278. Sri K. P. REVANNASIDDAPPA (Tiptur).—

Will the Government be pleased to state.—

(*a*) the number of drinking water wells in Tiptur Taluk, the work of which is yet incomplete ;

(*b*) whether it is not the duty of Government to sanction full grant to enable the completion of the work, as there are not enough funds, in the Panchayat and Taluk Board ;

(*c*) the stage at which the well work at Karekurchi village is pending ?

A.—Sri T. SUBRAMANYA (Minister for Development and Local Self-Government).—

(*a*) 89.

(*b*) No.

(*c*) This well is one of the incomplete works pending for want of funds. The question of providing funds for the purpose is under consideration of Government.

†ಶ್ರೀ ಟಿ. ಸುಬ್ರಹ್ಮಣ್ಯ.—(ಎ) ಪ್ರಶ್ನೆಗೆ ಉತ್ತರ 89 ಎಂದು ಹೇಳಿದೆ. ಅದನ್ನು 66 ಎಂಬುದಾಗಿ ತಿದ್ದಿಕೊಳ್ಳಬೇಕು.

ಶ್ರೀ ಕೆ. ಪಿ. ರೇವಣ ಸಿದ್ದಪ್ಪ.—ತಿಪಟೂರು ತಾಲ್ಲೂಕಿನಲ್ಲಿ 66 ಬಾವಿಗಳ ಕೆಲಸವು ಪೂರ್ಣವಾಗಿಲ್ಲವೆಂದು ಹೇಳಿದಿರಿ. ತಿಪಟೂರ್ ತಾಲ್ಲೂಕಿನಲ್ಲಿರತಕ್ಕ ಒಟ್ಟು ಗ್ರಾಮಗಳ ಸಂಖ್ಯೆ ಎಷ್ಟು ?

ಶ್ರೀ ಟಿ. ಸುಬ್ರಹ್ಮಣ್ಯ.—ಅಲ್ಲಿ ಒಟ್ಟು ಗ್ರಾಮಗಳ ಸಂಖ್ಯೆ 240 ಎಂದು ಕಾಣುತ್ತದೆ.

ಶ್ರೀ ಕೆ. ಪಿ. ರೇವಣ ಸಿದ್ದಪ್ಪ.—ಈ ಪ್ರಶ್ನೆಯನ್ನು ನಾನು ಈ ಸಭೆಯಲ್ಲಿ ಹತ್ತಾರುಸಾರಿ ಹಾಕಿದ್ದೇನೆ. ಆಗಲೂ ಇದೇ ಉತ್ತರವೇ. ನಾನು ಹತ್ತಾರು ವರ್ಷಗಳಿಂದ ಯಾವ್ಯಾವ ಆಫೀಸಿನಲ್ಲಿ ಈ ವಿಚಾರವಾಗಿ ಎಷ್ಟೆಷ್ಟು ರಿಕಾರ್ಡ್‌ಗಳು ಇತ್ಯರ್ಥವಾಗದೆ ಉಳಿದಿವೆ ಎಂದು ಕೇಳಿದರೆ, ನೀವು 66 ಬಾವಿಗಳ ಕೆಲಸ ಪೂರ್ಣವಾಗದೆ ನಿಂತಿವೆ ಎಂದು ಹೇಳುತ್ತೀರಿ. ಅಂದಮೇಲೆ ಮೈಸೂರು ದೇಶದಲ್ಲಿ ಇಂಥಾದ್ದು ಇನ್ನೂ ಎಷ್ಟು ಆಗಬಹುದು ಎಂದು ನಿಮ್ಮ ಅಂದಾಜು.

ಶ್ರೀ ಟಿ. ಸುಬ್ರಹ್ಮಣ್ಯ.—ಅದನ್ನು ಹೇಳುವುದಕ್ಕಾಗುವುದಿಲ್ಲ.

ಶ್ರೀ ಕೆ. ಪಿ. ರೇವಣ ಸಿದ್ದಪ್ಪ.—ಹತ್ತಾರು ವರ್ಷಗಳಿಂದ ಎಷ್ಟೆಷ್ಟು ಯಾವ್ಯಾವ ಆಫೀಸಿನಲ್ಲಿ ಕುಡಿಯುವ ನೀರಿನ ಬಾವಿಗಳ ರಿಕಾರ್ಡುಗಳು ನಿಂತಿವೆ ಎಂಬುದು ಸರ್ಕಾರದ ಗಮನಕ್ಕೆ ಬಂದಿದೆಯೇ ?

ಶ್ರೀ ಟಿ. ಸುಬ್ರಹ್ಮಣ್ಯ.—ತಮ್ಮ ಪ್ರಶ್ನೆಯೊಳಗೆ ಅದಿಲ್ಲ.

ಶ್ರೀ ಬಿ. ಕೆ. ನಾಗನೂರ್.—240 ಗ್ರಾಮಗಳಲ್ಲಿ 66 ಬಾವಿಗಳನ್ನು ಈಗ ಕೊಟ್ಟಿದ್ದೇವೆಂದು ಹೇಳಿದ್ದೀರಿ. ಹಾಗಾದರೆ ಆ ತಾಲ್ಲೂಕಿಗೆ ಒಟ್ಟು ಎಷ್ಟು ಬಾವಿಗಳನ್ನು ಕೊಡಬೇಕೆಂದು ಸರ್ಕಾರ ನಿರ್ಧಾರ ಮಾಡಿದೆ ?

ಶ್ರೀ ಟಿ. ಸುಬ್ರಹ್ಮಣ್ಯ.—ಒಟ್ಟು 240 ಗ್ರಾಮಗಳಲ್ಲಿ 193 ಕುಡಿಯುವ ನೀರಿನ ಬಾವಿಗಳನ್ನು ಕೊಟ್ಟಿದೆ. ಅವು ಇನ್ನೂ ಇಕಂಪ್ಲೀಟ್ ಆಗಿರುವುವು. ಕುಡಿಯುವ ನೀರಿನ ವ್ಯವಸೆಯಿಂದ ಪೂರ್ತಿಯಾಗಿರುವುವು ಕೇವಲ 33. ಫೈನಲ್ಲಾಗಿ ಬಿಲ್ ಆಗದೇ ಇರುವುದರಿಂದ ಅವನ್ನು ಇಕಂಪ್ಲೀಟ್ ಎಂದು ಹೇರಿನರಾಗಿದೆ. ಇನ್ನು 7 ಬಾವಿಗಳಿಗೆ ಪ್ಯಾರಪಟ್‌ವಾಲನ್ನು ಹಾಕಿಲ್ಲ.

ಶ್ರೀ ಕೆ. ಪಿ. ರೇವಣ ಸಿದ್ದಪ್ಪ.—ಬಾವಿಗಳಿಗೆ ಸ್ಪೆಶಾ ್ಯರಾಪಟ್ ವಾಲ್‌ಗಳನ್ನು ಇಪ್ಪು ವರ್ಷಗಳಿಂದ ಹಾಕದೇ ಇರುವುದರಿಂದ ಗಾ್ರಮಸ್ಥರಿಗೆ ನೀರಿಗಾಗಿ ಬಹಳ ತೊಂದರೆ ಯಾಗುತ್ತಿರುವುದನ್ನು ಗಾ್ರಮದ ಪಂಚಾಯಿತಿಯವರು ನೋಡಿದರೂ ಅವರಲ್ಲಿ ಸಾಕಷ್ಟು ನಿಧಿ ಇಲ್ಲದೆ ಇರುವುದರಿಂದ ಅವರು ಆ ಯಾವಕೆಲಸಕ್ಕೂ ಕೈಹಾಕದೇ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ?

ಶ್ರೀ ಟಿ. ನುಬ್ರಹ್ಮಣ್ಯ.—ಗಾ್ರಮ ಪಂಚಾಯಿತಿ ಹಾಗೂ ತಾಲ್ಲೂಕ್ ಬೋರ್ಡಿನವರು ಮೊದಲು ಕಂಟಾ ್ರಕ್ಟುದಾರರಿಗೆ ನೋಟೀಸ್ ಕೊಡಬೇಕು. ಅದು ಸರ್ಕಾರದ ಜವಾಬ್ದಾರಿ ಯಲ್ಲ. ಬೇರೆಯವರಿಗೆ ಕಂಟಾ ್ರಕ್ಟ್ ಕೊಡೋಣವೆಂದರೆ ಅವರು ಅರ್ಧಂಬರ್ಧ ಕೆಲಸ ಮಾಡಿ ಬಿಟ್ಟು ಹೋಗಿರುತ್ತಾರೆ. ಆಗ ಇನ್ನೊಂದುಸಾರಿ ಅವರಿಗೆ ನೋಟೀಸ್ ಕೊಡಬೇಕು. ರಿ–ಎಸ್ಟಿಮೇಟ್ ಆಗಬೇಕು. ಈಗ 66 ಬಾವಿಗಳ ಪೈಕಿ 33 ಬಾವಿಗಳ ಕೆಲಸ ಪೂರ್ತಿಯಾಗಿದೆ. 7 ಬಾವಿಗಳ ವಾ್ಯರಾಪಟ್‌ವಾಲ್ ಕೆಲಸವೂ ಆಗುತ್ತಿದೆ. ಈಗ ಎರಾ್ಲ ಬಾವಿಗಳ ಕೆಲಸ ಪೂರ್ತಿಯಾಗುವ ಸ್ಥಿತಿಯಲ್ಲಿದೆ.

ಶ್ರೀ ಕೆ. ಪಿ. ರೇವಣ ಸಿದ್ದಪ್ಪ.—ಗಾ್ರಮಗಳಲ್ಲಿ ಕುಡಿಯುವ ನೀರಿನ ಬಾವಿಗಳನ್ನು ಸಾಕಷ್ಟು ಒದಗಿಸುವುದು ಸರ್ಕಾರದ ಆದ್ಯಕರ್ತವ್ಯವಲ್ಲವೇ ?

ಶ್ರೀ ಟಿ. ನುಬ್ರಹ್ಮಣ್ಯ.—ಬಾವಿಗಳನ್ನು ಒದಗಿಸಲೇ ಬೇಕಾದುದು ಸರ್ಕಾರದ ಕರ್ತವ್ಯ ವೇನೋ ನರಿ. ಆ ಕೆಲಸ ಪಂಚಾಯಿತಿದಾರರದೂ ಆಗಿದೆ. ಅವರು ನುಮ್ಮನಿದ್ದರೂ ನಾವು ನುಮ್ಮನಿರುವುದಿಲ್ಲ. ಕೆಲವು ಪಂಚಾಯಿತಿದಾರರು ಆ ಬಾಬಿಗೆ ದುಡ್ಡು ಇಲ್ಲವೆಂದು ಹೇಳಿ ಬಿಡ್ತಾರೆ. ಶೇ. 10 ರಂತೆ ಸರ್ಕಾರದವರು ತಮ್ಮ ಭಾಗವನ್ನು ಕೊಡುತ್ತಾರೆ. ಉಳಿದು ದನ್ನು ಪಂಚಾಯಿತಿದಾರರು ಗಾ್ರಮಸ್ಥರಿಂದ ಕಂಟ್ರಿಬ್ಯೂಷ್ಟ್ ಮೂಲಕ ವಸೂಲುಮಾಡಿ ಕೊಡಬೇಕು.

ಶ್ರೀ ಕೆ. ಪಿ. ರೇವಣ ಸಿದ್ದಪ್ಪ.— ಕರೆಕುರ್ಚಿ ಹಳ್ಳಿಯಲ್ಲಿ ಕುಡಿಯುವ ನೀರಿನ ಬಾವಿ ಇಲ್ಲ. ತಾವು ನಹನೋಡಿದ್ದಿರೆಂದು ಕಾಣುತ್ತದೆ. ಅನೇಕ ಎಕ್ಸಿಕ್ಯೂಟೀವ್ ಇಂಜನಿಯರುಗಳೂ ಹೊಗಿ ನೋಡಿದ್ದಾರೆ. ಆ ಗಾ್ರಮದಲ್ಲಿ 20 ವರ್ಷದಿಂದ ಕುಡಿಯುವ ನೀರಿನ ಬಾವಿಇಲ್ಲದಿರುವುದರಿಂದ ಜನರು ಬದುಕಲು ಅಸಾಧ್ಯವಾಗಿದೆ ಎನ್ನುವುರು ಗೊತ್ತಿದೆಯೇ.

ಶ್ರೀ ಟಿ. ನುಬ್ರಹ್ಮಣ್ಯ.— ಜನರು ಬದುಕಿರುವುದರಿಂದ, ಸಾಧ್ಯವಾಗಿದೆ ಯೆಂದು ಗೊತ್ತಿದೆ. ಆಪರೆ ಅಲ್ಲಿ ಕುಡಿಯುವುದಕ್ಕೆ ನೀರಿಲ್ಲವೆನ್ನುವುದನ್ನು ಒಪ್ಪಿಕೊಳ್ಳುತ್ತೇನೆ. ಎರಡು ಬಾವಿ ತೋಡಿ ನಿದರೂ ನೀರು ಬರಲಿಲ್ಲ ಒಂದನ್ನು 111ಅಡಿ, ಇನ್ನೊಂದನ್ನು 84 ಅಡಿವರೆಗೂ ತೋಡಿದರು. ಅಷ್ಟರಲ್ಲಿ ಕಚ್ಚೆದುರನ್ನು ಮಾಡಿಯೆಂದು ನಜೆಶನ್ ಬಂದಿತ್ತು, ಆದ್ದರಿಂದ ಅದನ್ನೆ ದುರಸ್ತು ಮಾಡಿಯೆಂದು ಪಿ.ಡಬ್ಲ್ಯು.ಡಿ.ಗೆ ಹೇಳಿದೆವು : ಅವರು ಅದರಿಂದ ಜಪೀನು ನಾಗುವಳಿಯಾಗುವುದಿಲ್ಲ ವಾದ್ದರಿಂದ, ಅದರ ಕೆಲನವನ್ನು ತೆಗೆದು ಕೊಳ್ಳುವುದಕ್ಕಾಗುವುದಿಲ್ಲವೆಂದು ಅವರು ಹೇಳಿದರು. ಡೆಪ್ಯುಟಿ ಕಮಿಷನರು 20 ನಾವಿರ ರೂಪಾಯಿ ನ್ಪೆಶಲ್ ಗಾ್ರಂಟಿನಿಂದ ಕಚ್ಚೆ ದುರಸ್ತಿಗೆ ಶಿಫಾರನು ಮಾಡಿದ್ದಾರೆ. ಆದನ್ನು ಯಾವ ಹೆಡ್ಡಿನಲ್ಲಿ ಕೊಡುವುದಕ್ಕಾಗುತ್ತದೆ ಎನ್ನುವುದನ್ನು ಹೇಳಿಲ್ಲ. ನಮಗೆ ಬಂದಿರುವ ರಿಪೋರ್ಟ್ ಪ್ರಕಾರ ಆ ಹಳ್ಳಿಯ ಜನನಂಖ್ಯೆ 150 ಎಂದು ತಿಳಿದು ಬಂದಿದೆ. 20ನಾವಿರ ರೂಪಾಯಿ ಖರ್ಚು ಮಾಡಬೇಕಾದರೆ ತಲಾ ಒಬ್ಬ ಮನುಷ್ಯನಿಗೆ ಎಪ್ಪು ಹಣ ಬೀಳುತ್ತ ದೆನ್ನುವುದನ್ನು ಲೆಕ್ಕ ಹಾಕಬೇಕು. ಶ್ರೀ ಪುಟ್ಟಣ್ಣನವರು ಅಲ್ಲಿ ವಿಪರೀತ ದನಗಳು ಮೆಯ್ಯುವುದಕ್ಕೆ ಬರುತ್ತವೆ, ಅವುಗಳಿಗೆ ಕುಡಿಯುವುದಕ್ಕೆ ನೀರಿಲ್ಲವೆಂದು ಹೇಳಿದರು. ಮೋನ್ನೆ 20 ನಾವಿರ ರೂಪಾಯಿ ನ್ಪೆಶಲ್ ಗಾ್ರಂಟಿಗೆ ಬಂದಿದೆ. ನರ್ಕಾರ ಅದನ್ನು ವಿಮರ್ಶೆ ಮಾಡುತ್ತಾ ಇದೆ.

ಶ್ರೀ ಜಿ. ಎಸ್. ಪುಟ್ಟಣ್ಣ.—ಅಲ್ಲಿ 3-4 ಸಾವಿರ ಜನ ಕೂಲಿಗಳು ಮೈನಿಂಗ್ ಆಪರೇಷನ್ನಿನಲ್ಲಿ ಕೆಲಸ ಮಾಡುತ್ತಾ ಇದ್ದಾರೆ. ಸಾಮಾನ್ಯವಾಗಿ 8-10 ಸಾವಿರ ದನಗಳು ಅಲ್ಲಿ ಇರುತ್ತವೆ. ಕಚ್ಚೆ ಆಗದೆ ಹೋದರೆ, ಬೋರ್ ವೆಲ್ಲವನ್ನಾದರೂ ಹಾಕಬಹುದಲ್ಲ. ಅದಕ್ಕೆ 20 ಸಾವಿರ ರೂಪಾಯಿ ಬೇಕಿಲ್ಲ. ಆ ಹಳ್ಳಿಯಲ್ಲಿ 60 ಮನೆಗಳಿವೆ ; ಮೈನಿಂಗ್ ಆಪರೇಷನ್ನಿನವರದೂ ಸೇರಿದರೆ 500 ಮನೆಗಳಾಗುತ್ತವೆ.

ಶ್ರೀ ಟಿ. ಸುಬ್ರಹ್ಮಣ್ಯ.— ಮೈನಿಂಗ್ ಜನಗಳಿಗೆ ಮೈನ್ ಜನರುಗಳು ಡ್ರಿಂಕಿಂಗ್ ವಾಟರ್ ವೇರ್ಸ್ ಪ್ರೊವೈಡ್ ಮಾಡಬೇಕು. ಎಷ್ಟರೀತ ಹಣ ಖರ್ಚು ಮಾಡಿದರೂ, ಫಾಯಿದೆ ಆಗಿಲ್ಲ. ಒಂದು ಕಡೆ110 ಆಡಿ, ಇನ್ನೊಂದು ಕಡೆ 84 ಆಡಿ ತೊಡಿದ್ದರೂ, ನೀರು ಬರುವುದಿಲ್ಲ. ಇನ್ನು ಬೋರ್ ವೆಲ್ ಹಾಕಬಿಡಿ ಎಂದು ಮಾನ್ಯನದಸ್ಯರು ಹೇಳಿದರು. ಕಚ್ಚೆ ಮಾಡುವುದು ಸುಲಭವೇ, ಬೋರ್ ವೆಲ್ ಮಾಡುವುದು ಸುಲಭವೇ ಎಂಬುದನ್ನು ನೋಡಿ ತೀರ್ಮಾನ ಮಾಡಬೇಕಾಗಿದೆ,

ಶ್ರೀ ಜಿ. ಎಸ್. ಪುಟ್ಟಣ್ಣ.—ಇದನ್ನು ಸಾಮಾನ್ಯವಾಗಿ 10 ವರ್ಷದಿಂದ ಕೇಳುತ್ತಾ ಇದ್ದೆವೆ. ಅಲ್ಲರುವವರೂ ನಮ್ಮ ದೇಶದ ಪ್ರಜೆಗಳು ಇದನ್ನು ಎಷ್ಟು ವರ್ಷಗಳಲ್ಲಿ ಮಾಡುತ್ತೀರ ?

ಶ್ರೀ ಟಿ. ಸುಬ್ರಹ್ಮಣ್ಯ.—ಇಷ್ಟೇ ದಿವಸಗಳಲ್ಲಿ ಮಾಡುತ್ತೇವೆಂದು ಹೇಳುವುದಕ್ಕಾಗುವುದಿಲ್ಲ; ಇವತ್ತೇ ಹುಂ ಎಂದು ಹೇಳುವುದಕ್ಕಾಗುವುದಿಲ್ಲ. ಟೆಕ್ನಿಕಲ್ ಅಡ್ವೈಸ್ ಬರಬೇಕು, ಫೀಸಿಬಲ್ ಎಂದಾಗಬೇಕು. ಕ್ಯಾಪಿಟಲ್ ಎಕ್ವೆಪೆಂಡಿಚರ್ ಪರ್‌ಕ್ಯಾಪಿಟ ನೋಡಿ, ಆ ಮೇರೆ ತಿರ್ಮಾನ ಮಾಡಬೇಕಾಗಿದೆ.

ಶ್ರೀ ಬಿ. ಕೆ. ನಾಗೂರ್.— (ಬಿ)ಗೆ ಉತ್ತರವಾಗಿ ಪೂರ್ತ ಅನುದಾನವನ್ನು ಕೊಡುವುದು ಸರ್ಕಾರದ ಕರ್ತವ್ಯವಲ್ಲ ಎಂದು ಹೇಳಿದ್ದಾರೆ. ಪಂಚಾಯಿತಿಯಲ್ಲಿ ರೊಕ್ಕವಿಲ್ಲ; ತಾಲೂಕು ಬೋರ್ಡಿನಲ್ಲಿ ರೊಕ್ಕವಿಲ್ಲ; ಸರ್ಕಾರದ್ದು ಕರ್ತವ್ಯವಲ್ಲವೆನ್ನುತ್ತೀರ. ಆ ಜನ ಯಾರನ್ನು ಕೇಳಬೇಕು ?

ಅಧ್ಯಕ್ಷರು.—ಕನ್ನಡದ ಪ್ರಶ್ನೋತ್ತರ ಪಟ್ಟಿ ಇಲ್ಲವೆನ್ನುತ್ತಿದ್ದಿರಿ. ಆದರೆ ಕನ್ನಡದ ಪಟ್ಟಿಯಿಂದಲೆ ಓದುತ್ತಿದ್ದಿರಿ?

ಶ್ರೀ ಬಿ. ಕೆ. ನಾಗೂರ್.— ಕನ್ನಡದ ಲಿಸ್ಟ್ ಬಂದಿದೆ.

Sri T. SUBRAMANYA.— It is not the obligatory duty of the Government now after the passing of the Village Panchayats and Taluk Boards Act. It is the obligatory duty of the Village Panchayat. I have also said, wherever they have no money, out of the funds available in their name at the disposal of the Divisional Commissioner, we will instruct the Divisional Commissioner to pay some amount.

Sri G. N. PUTTANNA.— Will the Government give top priority for this ?

Sri T. SUBRAMANYA.— Generally, water supply will receive top priority. We may do our best.

Sri G. N. PUTTANNA.— Particularly under tnis...

Sri T. SBRAMANYA.— Particularly, we cannot say.

ಶ್ರೀ ಕೆ. ಪಿ. ರೇವಣ ಸಿದ್ದಪ್ಪ.—ಹಿಂದೆ ಇದೇ ಪ್ರಶ್ನೆ ಬಂದಿದ್ದಾಗ, ಒಂದು ವರ್ಷದೊಳಗೆ ಮಾಡಿಕೊಡುತ್ತೇವೆಂದು ತಾವು ಆಷ್ಟಣೆ ಕೊಟ್ಟಿರುವುದು ಸರ್ಕಾರದ ಗಮನದಲ್ಲಿದೆಯೇ!

ಶ್ರೀ ಟಿ. ಸುಬ್ರಹ್ಮಣ್ಯ.— ನನಗೆ ಜ್ಞಾಪಕವಿಲ್ಲ. ಒಂದು ವರ್ಷದೊಳಗೆ ಮಾಡಿಕೊಡುತ್ತೇನೆ ಎಂದು ನಾನು ಒಪ್ಪಿಕೊಂಡಿದ್ದೇನೆಂದು ಹೇಳುವುದರಲ್ಲಿ ನನಗೆ ನಂಬಿಕೆ ಇಲ್ಲ.